# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 749
ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 13.03.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ವರ್ಷ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ ಮುರಿದಾಗ ತಾತ್ಕಾಲಿಕ ಕ್ರಸ್ಟ್ ಗೇಟ್ ಅಳವಡಿಸಿದ್ದು, ನಂತರದಲ್ಲಿ ಪೂರ್ಣ ಪ್ರಮಾಣದ ದುರಸ್ತಿ ಮಾಡಿ ಹೊಸ ಕ್ರಸ್ಟ್ ಗೇಟ್ ಅನ್ನು ಈಗಾಗಲೇ ಅಳವಡಿಸಲಾಗಿದೆಯೇ; | ಇಲ್ಲ. |
| ಆ) | ಇಲ್ಲದಿದ್ದಲ್ಲಿ, ಕೇಂದ್ರ ಜಲ ಆಯೋಗದ ತಜ್ಞರ ಸಮಿತಿ ಸಹ ಹೊಸ ಕ್ರಸ್ಟ್ ಗೇಟ್ ಅಳವಡಿಸಲು ಶಿಫಾರಸ್ಸು ಮಾಡಿದ್ದರೂ ಇದುವರೆವಿಗೂ ಆ ಕುರಿತು ಯಾವುದೇ ಅಗತ್ಯ ಕ್ರಮ ಕೈಗೊಳ್ಳದಿರಲು ಕಾರಣಗಳೇನು; | ತುಂಗಭದ್ರಾ ಯೋಜನೆಯು ಅಂತರ ರಾಜ್ಯ ಯೋಜನೆಯಾಗಿದ್ದು, ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ನಿರ್ವಹಣೆಯು ತುಂಗಭದ್ರಾ ಮಂಡಳಿಯ ವ್ಯಾಪ್ತಿಯಲ್ಲಿರುತ್ತದೆ.<br><br>ದಿನಾಂಕ:10.08.2024ರಂದು ತುಂಗಭದ್ರಾ ಜಲಾಶಯದ ಗೇಟ್ ನಂ.19 ರ ಚೈನ್ ಲಿಂಕ್ ವೈಫಲ್ಯದಿಂದ ಗೇಟಿನ ಭಾಗವು ನೀರಿನಲ್ಲಿ ಕೊಚ್ಚಿಹೋಗಿದ್ದರಿಂದ, ತಾತ್ಕಾಲಿಕವಾಗಿ ಸ್ಟಾಪ್‌ಲಾಗ್ ಗೇಟ್‌ನ್ನು ಅಳವಡಿಸಲಾಗಿರುತ್ತದೆ.<br><br>ಅಣೆಕಟ್ಟಿನ ಹೊಸ ಕ್ರೆಸ್ಟ್ ಗೇಟಿನ ವಿನ್ಯಾಸವನ್ನು ದಿನಾಂಕ:02.03.2025 ರಂದು ನಿರ್ದೇಶಕರು, ಕೇಂದ್ರ ಜಲ ಆಯೋಗ ಇವರಿಂದ ಪಡೆಯಲಾಗಿದ್ದು, ಮುಖ್ಯ ಇಂಜಿನಿಯರ್, CDO of Member States ಮತ್ತು CWC, New Delhi ಇವರ ಪರಾಮರ್ಶೆಗಾಗಿ ತುಂಗಭದ್ರಾ ಮಂಡಳಿಯಿಂದ ಸಲ್ಲಿಸಲಾಗಿದೆ.<br><br>ಮುಂದುವರೆದು, ಅಣೆಕಟ್ಟೆಯ 32 ಗೇಟುಗಳ comprehensive health Checkup ಪ್ರಗತಿಯಲ್ಲಿದ್ದು, ವರದಿ ಪಡೆದು, ಅಗತ್ಯತೆಯನುಸಾರ ಹಂತ ಹಂತವಾಗಿ ಹೊಸ ಗೇಟುಗಳನ್ನು ಅಳವಡಿಸಲು ತುಂಗಭದ್ರಾ ಮಂಡಳಿಯಿಂದ ಕ್ರಮ ಕೈಗೊಳ್ಳಲಾಗುವುದು. |
| ಇ) | ಯಾವ ಕಾಲಮಿತಿಯೊಳಗೆ ಮುರಿದ ಕ್ರಸ್ಟ್ ಗೇಟ್‌ಗೆ ಶಾಶ್ವತ ಗೇಟ್ ಅಳವಡಿಸಿ ಆ ಮೂಲಕ ಕಳೆದ ವರ್ಷ ಸಂಭವಿಸಿದ ಅನಾಹುತ ಮತ್ತೊಮ್ಮೆ ಸಂಭವಿಸದಂತೆ ಅಗತ್ಯ ಕ್ರಮ ವಹಿಸಲಾಗುವುದು? | |

ಜಸಂಇ 41 ಎಂಎಲ್ಎ 2025

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ